ಚಲನೆ ಮತ್ತು ಅವಕಾಶ.

ಹೇಳಿಕೇಳಿ ನಾನು ಯುರೋಪಿನ ಫಿಲಾಸಾಫಿಕಲ್ ಸ್ಕೂಲ್‌ಗಳನ್ನು ಆಳವಾಗಿ ಓದಿದವನು. ಕನ್ನಡದಲ್ಲಿ ನಾನು ಮಂಡಿಸಬೇಕಾದ ವಿಚಾರಗಳಿಗೆ ತಕ್ಕ ಪರಿಕಲ್ಪನೆಗಳೇ ಇರಲಿಲ್ಲ. ಮಾನವಶಾಸ್ತ್ರ, ಮನಃಶಾಸ್ತ್ರ, ಚರಿತ್ರೆ, ಆದಿವಾಸಿ ಅಧ್ಯಯನಗಳು ನನ್ನ ಆಲೋಚನೆಯ ತಾತ್ವಿಕತೆಗೆ ಬುನಾದಿಯಾಗಿ ಬಂದವು. ಅಂಬೇಡ್ಕರ್‌ವಾದವು ಬಲವಾದ ಕಾಂಡದಂತೆ ಬೆಂಬಲಕ್ಕೆ ಬಂತು. ಹೀಗಾಗಿಯೆ ನಾನು 'ಅಸ್ಪೃಶ್ಯ ಮೀಮಾಂಸೆ', 'ಜಲತತ್ವ ಹಾಗು ಅಗ್ನಿತತ್ವ', 'ದಲಿತತ್ವ', 'ಜಾತಿ ಮೀಮಾಂಸೆ', 'ದಲಿತರು ಬೇರು ಸವರ್ಣೀಯರು ರೆಂಬೆಕೊಂಬೆ' ಎಂದು ಅನೇಕ ಹೊಸ ನುಡಿಗಟ್ಟುಗಳನ್ನು ಮೊದಲಿಗೆ ಬರೆದೆ. ಅನೇಕರು ಅವನ್ನೆಲ್ಲ ರಿಜೆಕ್ಟ್ ಮಾಡಿದರು. ಇದನ್ನು 'ಬೌದ್ಧಿಕ ಅಸ್ಪೃಶ್ಯತೆ' ಎಂದು ಕರೆದೆ. ನನ್ನ ವಿಮರ್ಶೆಗಳಲ್ಲಿ ಹೆಚ್ಚಾಗಿ ತಾತ್ವಿಕತೆ ಇದೆ. ಇದರ ಅಗತ್ಯ ದಲಿತರ ವಿಮೋಚನೆಯ ಭಾಷೆಗೆ ಬೇಕೆನಿಸಿತು. 'ಆದಿಮ ಜಾನಪದ', 'ದಲಿತ ಜಾನಪದ' ಕೃತಿಗಳಲ್ಲಿ ಅನೇಕ ಚಿಂತನೆಗಳಿವೆ. ನನ್ನನ್ನು ಓದುವವರೇ ಕಡಿಮೆ. ಸಾಹಿತ್ಯವನ್ನು ಆಳುವ ಯಜಮಾನರೆಲ್ಲ ನನ್ನ ಬರಹಗಳ ಓದಿಗೆ ಬಹಿಷ್ಕಾರ ಹಾಕಿದ್ದಾರೆ. ಅದರಿಂದ ನಾನೇನೂ ವಿಚಲಿತನಾಗಿಲ್ಲ. ಇದೆಲ್ಲ ಮಾಮೂಲು. ಸಾಹಿತ್ಯದಲ್ಲಿ ತುಳಿಯುವ ಗುಂಪುಗಳು ಇದ್ದೇ ಇರುತ್ತವೆ. ಲೇಖಕರು ಆ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು.



◆ **ನೀವು ಬಂಡಾಯ ಸಾಹಿತ್ಯದ ಮಾದರಿಗಳನ್ನು ನಿರಾಕರಿಸಿದಿರಿ; 'ಬಂಡಾಯ ಕವಿಗಳ ಬದ್ಧತೆ ಎಷ್ಟೇ ಶ್ರೇಷ್ಠವಾಗಿದ್ದರೂ ಅವರ ಪದ್ಯಗಳು ಶ್ರೇಷ್ಠ ಮಾದರಿ ಆಗಲಿಲ್ಲ. ಸೃಜನಶೀಲ ಶಕ್ತಿಯನ್ನು ನಿಯಂತ್ರಿಸಲು ಯಾವಾಗಲೂ ಒಂದೊಂದು ಬಗೆಯ ಬದ್ಧತೆಯ ಪ್ರತಿಪಾದನೆ ಆಗುತ್ತಿರುತ್ತದೆ. ಇದನ್ನು ಮೀರಿದವರು ಮಾತ್ರ ಸದಾ ಕಾಲ ಬದುಕಿರುತ್ತಾರೆ' ಅಂತ ಹೇಳಿದ್ದೀರಿ. ಬದ್ಧತೆ ಮತ್ತು ಶ್ರೇಷ್ಠತೆ ಒಟ್ಟಿಗೆ ಹೋಗಲು ಸಾಧ್ಯವಿಲ್ಲವೆ?**

ನೀವೇ ನೋಡಿ; ಅನಕೃ ಅವರನ್ನು 'ಕಾದಂಬರಿಗಳ ಸಾರ್ವಭೌಮ' ಎಂದು ಕರೆದರು. ಜನಪ್ರಿಯ ಕಾದಂಬರಿಕಾರರ ಒಂದು ಹಿಂಡೇ ಇದೆ. ಅವರು ಬರೆದದ್ದು ಬದ್ಧತೆಯಿಂದಲೇ ಇರಬಹುದು. ಅವರ ಬದ್ಧತೆಗೆ ಎಷ್ಟು ಮಿತಿಗಳಿವೆ ಎಂಬುದನ್ನು ಸೂಕ್ಷ್ಮವಾಗಿ ಕಾದಂಬರಿ ಓದುವವರೆಲ್ಲಾ ಬಲ್ಲರು. ಅನೇಕ ಲೇಖಕರು ಸರ್ಕಾರಿ ಲೇಖಕರಾಗಿ ತಮ್ಮನ್ನು ತಾವು ಮಾರಿಕೊಳ್ಳುತ್ತಿರುವುದನ್ನು ಅಸಹಾಯಕವಾಗಿ ನೋಡುತ್ತಿದ್ದೇವೆ. ಬದ್ಧತೆಯು ಒಂದು ಸುಳ್ಳಿನಂತಾಗಿದೆ. ಜನತೆಗಾಗಿ ಬರೆಯುತ್ತೇವೆ ಎಂಬುದು ವಂಚನೆಯ ಮಾತು. ಅಷ್ಟರ ಮಟ್ಟಿಗೆ ಬದ್ಧತೆಯೂ ಭ್ರಷ್ಟವಾಗಿದೆ. ಸೋವಿಯತ್ ರಷ್ಯಾದಲ್ಲೂ ನಲವತ್ತು ವರ್ಷಗಳ ಹಿಂದೆ ಮಾರ್ಕ್ಸ್‌ವಾದಿ ತತ್ವಬದ್ಧತೆಯಲ್ಲೇ ಸಾವಿರಾರು ಲೇಖಕರು ಕಾರ್ಮಿಕ ಪ್ರಭುತ್ವಕ್ಕೆ ಬರೆದು ಬರೆದು ಮೊಂಡಾಗಿ ಕಳೆದುಹೋದರು. ಬಂಡಾಯ ಕಾವ್ಯದಲ್ಲಿ ಅತ್ಯುನ್ನತವಾದ ಅಭಿವ್ಯಕ್ತಿಯನ್ನು ಯಾರು ಮಾಡಿದ್ದಾರೆಂದು ತಕ್ಷಣ ಹೇಳಲು ಬರುವುದೇ? ಒಬ್ಬನೇ ಒಬ್ಬ ಕವಿ ಕಾಣಲಾರ. ಹುಸಿ ಬಂಡಾಯದವರು ವಿಪರೀತ ಇದ್ದಾರೆ. ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಗಾರ್ಕಿ, ಆ್ಯಂಟನ್ ಚೆಕಾವ್, ನಿಕಾಯ್ ಗೋಗೋಲ್‌ರಂತಹ ಲೇಖಕರು ರಷ್ಯಾದಲ್ಲೇ ಹುಟ್ಟಿ ಬಂದವರು. ಕ್ರಾಂತಿಗೆ ಬುನಾದಿ ಹಾಕಿದ್ದು ಈ ಲೇಖಕರ ಬರಹಗಳು. ಆ ಮಟ್ಟದ ಕಲಾತ್ಮಕ ಪ್ರತಿರೋಧ ನಮ್ಮಲ್ಲಿ ಸಾಧ್ಯವಾಗಲಿಲ್ಲ. ಕಲೆಯಾಗದ ಅನುಭವ ಅಜೀರ್ಣವಾದಂತಹ ಒಂದು ಸಮಸ್ಯೆ. ಬದ್ಧತೆಯೇ ಭ್ರಷ್ಟಗೊಂಡರೆ ಅಂತಹ ಸಾಹಿತ್ಯ ಯಾಕೆ ಬೇಕು? ಬೂಸಾ ಸಾಹಿತ್ಯದ ಮಾತನ್ನು ಎತ್ತಿ ಹಿಡಿದವರೇ ಸಾವಿರಾರು ಪುಟಗಳ ಬೂಸಾ ಬರೆದಿದ್ದಾರೆ. ಬದ್ಧತೆ ಶ್ರೇಷ್ಠತೆ ಎರಡನ್ನೂ ಹೊಂದಿಸಿಕೊಂಡು ಆಫ್ರಿಕನ್ ಲೇಖಕರು ಬರೆಯಲಿಲ್ಲವೆ? ಬ್ರೆಕ್ಟ್‌ನ ಬದ್ಧತೆಯಲ್ಲಿ ಎಷ್ಟು ಸೂಕ್ಷ್ಮ ಕಲೆ ಇದೆ ಎಂಬುದು ಗಮನಿಸಿ. ನೆರೂಡನ ಕಾವ್ಯವನ್ನು ನೆನಪಿಸಿಕೊಳ್ಳಿ. ಮಾರ್ಕ್ವೆಸ್‌ನನ್ನಾಗಲಿ, ಸಲ್ಮಾನ್ ರಶ್ದಿಯನ್ನಾಗಲಿ ಓದಿ ನೋಡಿ. ಕಲಾತ್ಮಕವಾಗಿ ನಗಿಸುತ್ತಲೇ ಚಾಪ್ಲಿನ್ ಸರ್ವಾಧಿಕಾರಿಗಳ ನಿದ್ದೆ ಕೆಡಿಸಿದ. ಇಂತಹ ಬಹಳಷ್ಟು